# ಪುಸ್ತಕಲೋಕ

ಪುಟ್ಟ ಕೋಣೆಯೊಂದರಲ್ಲಿ ಸಾವಿರಾರು ಜನ ಒಟ್ಟಿಗೆ ಬದುಕುವುದು ಸಾಧ್ಯವೆ? ಜನ ಮಾತ್ರವಲ್ಲ, ಸಾವಿರಾರು ಲೋಕಗಳೇ ಕೋಣೆಯೊಂದರಲ್ಲಿ ಉಸಿರಾಡುವುದು ಸಾಧ್ಯವಿದೆ. ಐದಾರು ಮಂದಿಯ ಕುಟುಂಬದಲ್ಲಿ ಒಡಕು ಬಿಂಬಗಳು ಸಹಜ. ಆದರೆ, ಸಾವಿರ ಸಾವಿರ ಸದಸ್ಯರ ಈ ಕೂಡು ಕುಟುಂಬದಲ್ಲಿ ಒಡಕಿನ ಮಾತೂ ಇಲ್ಲ, ಬಿರುಕಿನ ಗೆರೆಯೂ ಇಲ್ಲ. ಪರಸ್ಪರ ಆತುಕೊಂಡಿದ್ದರೂ ಒಬ್ಬರ ಲೋಕದೊಳಗೊಬ್ಬರು ಹೆಜ್ಜೆಯಿಡದ, ಒಟ್ಟಿಗಿದ್ದರೂ ತಮ್ಮ ಅಸ್ತಿತ್ವ ಕಳೆದುಕೊಳ್ಳದ ಜೇನುಬಾಳುವೆಯಿದು. ಕವಿರಾಜಮಾರ್ಗಕಾರ ಹೆಸರಿಸಿದ 'ಪರಧರ್ಮ ಪರ ವಿಚಾರಗಳ ಸೈರಣೆ' ಸಾಕಾರಗೊಂಡಿರುವುದಿಲ್ಲಿ.

ಜೇನುಬಾಳುವೆಯೆಂದರಿದು ಜೇನ್ನೊಣಗಳ ಬದುಕಿನ ಕಥನವೆಂದರ್ಥವಲ್ಲ. ಇದು ಮನುಷ್ಯ ರೂಪಿಸಿಕೊಂಡ ಸೂರಿನೊಳಗಿನ ಸಹಬಾಳ್ವೆ. ಮನುಷ್ಯರಿಗೆ ಸಂಬಂಧಿಸಿದ, ಮನುಷ್ಯರೇ ರೂಪಿಸಿಕೊಂಡ, ಮನುಷ್ಯ ಮನುಷ್ಯನಾಗಿ ಉಳಿಯಲು ಅಗತ್ಯವಾದ ಲೋಕವಿವೇಕದ ಕಥನವಿದು. ಈ ವೇಳೆಗೆ ನಿಮಗೆ ಹೊಳೆದಿರಲೇಬೇಕು, ಇವುಗಳೆಲ್ಲ 'ಪುಸ್ತಕಪ್ರಪಂಚ' ಕುರಿತ ಮಾತುಗಳೆನ್ನುವುದು.

ಚಕ್ರ, ವಿಮಾನ, ಜೀವರಕ್ಷಕ ಔಷಧಿಗಳು ಸೇರಿದಂತೆ ತನ್ನ ಪ್ರತಿಕೃತಿಯನ್ನೇ ಸೃಷ್ಟಿಸುವ ಮಟ್ಟಿಗೆ ಮನುಷ್ಯ ಆಗುಮಾಡಿದ ಅದ್ಭುತ ಆವಿಷ್ಕಾರಗಳು ಒಂದೆರಡಲ್ಲ. ಈ ಎಲ್ಲ ಸಿದ್ಧಿಗಳನ್ನು ಮೀರುವಂತಹದ್ದು ಪುಸ್ತಕದ ಅಭಿವ್ಯಕ್ತಿ. ಮನುಷ್ಯ ಸೃಜಿಸಿದ ಮೇರುಸದೃಶ ಸೃಷ್ಟಿ ಪುಸ್ತಕ. ಕರುಳಕುಡಿ, ಪಡಿಯಚ್ಚು, ಕಂಪ್ಯೂಟರ್ ಬ್ರಹ್ಮಾಂಡ, ಯಂತ್ರಮಾನವ – ಪುಸ್ತಕದ ಜೀವಂತಿಕೆಗೆ ಯಾವುದೂ ಸಾಟಿಯಲ್ಲ. ಬುದ್ಧಿ–ಭಾವ, ಮೆದುಳು–ಹೃದಯ, ಇವುಗಳ ಎರಕದಿಂದ ಜೀವತಳೆದ ಪುಸ್ತಕ ಆಡಿಸುವವರ ಕೈಗೂಸು, ಎದೆಯಿಂದ ಎದೆಗೆ ಹರಿಯುವ ಅಮೃತವಾಹಿನಿ.

ಪ್ರತಿಯೊಂದು ಪುಸ್ತಕ ಆ ಕೃತಿಯ ಕರ್ತೃವಿನ ಜೀವಕೋಶದ ಭಾವಕೋಶದ ಬಿಂಬವಷ್ಟೇ ಅಲ್ಲ, ಸಮಾಜದ ಪ್ರತಿಬಿಂಬವೂ ಗತಿಬಿಂಬವೂ ಹೌದು. ಒಂದೊಂದು ಪುಸ್ತಕ ಒಂದೊಂದು ಲೋಕ; ಒಳಹೊಕ್ಕರೆ ತೆರೆದುಕೊಳ್ಳುವವು ಹಲವು ಲೋಕ. ಈ ಲೋಕಗಳು ವಾಮನರೂಪಿಗಳಂತೆ ಪುಟ್ಟ ಕಪಾಟಿನ ಚೌಕಟ್ಟಿನಲ್ಲಿ ಒಂದಕ್ಕೊಂದು ಆತುಕೊಂಡಿರುವುದಿದೆಯಲ್ಲ; ಅದು ಮನುಷ್ಯ ಕನವರಿಸುವ ಆದರ್ಶ; ಆತ್ಮಪ್ರಶಂಸೆಯಿಂದ ಮುಕ್ತವಾದ ಜೀವನಸೌಂದರ್ಯ ಹಾಗೂ ಅಸಾಧಾರಣ ಸಂಯಮದ ಮೂರ್ತರೂಪ. ಮನುಷ್ಯನಾಗುವ ನಿಟ್ಟಿನಲ್ಲಿ ಮನುಷ್ಯರು ನಡೆಸಿದ, ನಡೆಸುವ, ನಡೆಸುತ್ತಿರುವ ಪ್ರಯತ್ನಗಳೆಲ್ಲ ಪುಸ್ತಕಗಳ ರೂಪದಲ್ಲಿ ಪ್ರಕಟಗೊಂಡಿರುವಂತಿದೆ.

ಗಾಂಧಿಯನ್ನು ರೂಪಿಸಿದ್ದು ಒಂದು ಪುಸ್ತಕ. ಗಾಂಧಿಯನ್ನು ನಮಗುಳಿಸಿರುವುದೂ ಪುಸ್ತಕಗಳೇ. ಗಾಂಧಿ ಮಾತ್ರವಲ್ಲ, ಬುದ್ಧ, ಬಸವ, ಜಿನ, ಯೇಸು ಸೇರಿದಂತೆ ಏಸೊಂದು ಚೇತನಗಳು ಉಳಿದುಬಂದಿರುವುದೂ ಬರವಣಿಗೆ, ಪುಸ್ತಕಗಳ ಮೂಲಕವೇ. ಪುಸ್ತಕಗಳಿಲ್ಲದ ನಾಗರಿಕತೆಯುಂಟೆ? ಪುಸ್ತಕಗಳು ಇಲ್ಲದಿರುವುದನ್ನು ನಾಗರಿಕತೆ ಎನ್ನಲಾದೀತೆ?

ಅಂಬೇಡ್ಕರ್ ರೂಪುಗೊಂಡಿದ್ದೂ ಪುಸ್ತಕಗಳ ಮೂಲಕವೇ. ಈ ಕಾಲವನ್ನು ಪ್ರಭಾವಿಸುತ್ತಿರುವುದು ಅಂಬೇಡ್ಕರ್ ಕೃತಿಗಳೇ. ಸಂವಿಧಾನಕ್ಕಿಂತಲೂ ಪ್ರಭಾವಿಯಾದ ಪುಸ್ತಕ ಮತ್ತೊಂದುಂಟೆ? ಅಂಬೇಡ್ಕರ್ ಎನ್ನುವುದು ಬರಿಯ ಹೆಸರೇನು? ಅದೊಂದು 'ಪುಸ್ತಕ ಸಂಸ್ಕೃತಿ' – ಭಾರತೀಯರ ಗತಿ ಹಾಗೂ ಮತಿ.

ಅಮರನಾಗುವ ಹಂಬಲದಲ್ಲಿ ಮನುಷ್ಯ ನಡೆಸಿದ ಸಾಹಸಗಳು ಪುರಾಣ, ಇತಿಹಾಸಗಳಲ್ಲಿ ದಾಖಲಾಗಿವೆ. ಅಮರತ್ವದ ದಾರಿಯಲ್ಲಿ ಮನುಷ್ಯ ನೆಟ್ಟ ಮಹತ್ತರ ಮೈಲಿಗಲ್ಲು ಪುಸ್ತಕ. ಸಾವಿರಾರು ವರ್ಷಗಳ ಹಿಂದಿನ ಕವಿರಾಜಮಾರ್ಗಕಾರ, ಪಂಪ, ರನ್ನನಂಥ ಸಾಲುದೀಪಗಳು ಈ ಹೊತ್ತಿಗೂ ಉಳಿದುಬಂದು ಬೆಳಗುತ್ತಿರುವುದು ಪುಸ್ತಕಗಳ ಮೂಲಕವೇ. ಕಾಲಕ್ಕೆ ಸವಾಲಿನಂತೆ ಕಾಣಿಸುತ್ತಿರುವ ಕಾಳಿದಾಸ, ಶೇಕ್ಸ್‌ಪಿಯರ್ ಹೊಸಹುಟ್ಟುಗಳನ್ನು ಕಂಡುಕೊಳ್ಳುತ್ತಿರುವುದೂ ಪುಸ್ತಕಗಳ ಮೂಲಕವೇ. ಪುಸ್ತಕದ ಶಕ್ತಿ ನೋಡಿ: ಅಚೇತನವಾದ ಪುಸ್ತಕ ಸಹೃದಯರ ಸ್ಪರ್ಶದಲ್ಲಿ ತನ್ನೊಳಗಿನ ಲೋಕಗಳನ್ನು ತೆರೆದುಕೊಳ್ಳುತ್ತಾ, ಆ ಲೋಕಗಳನ್ನು ಓದುಗನೆದೆಯೊಳಗೆ ಅನಾವರಣಗೊಳಿಸುತ್ತಾ ಹೋಗುತ್ತದೆ. ಮನುಷ್ಯನಂತೆಯೇ ಪುಸ್ತಕವೂ ಬೆಳೆಯುತ್ತಾ ಹೋಗುತ್ತದೆ. ಪುಸ್ತಕದ ಈ ಜೀವಶಕ್ತಿಯನ್ನು ತಿಳಿಯಲು ಎಸ್. ದಿವಾಕರ್ ಅವರ 'ಪುಸ್ತಕ' ಕವಿತೆ ಓದಬೇಕು. ರವಿ–ಕವಿ ಎರಡೂ ಆಗಿರುವ ದಿವಾಕರ್ ಅವರಿಗೆ ಪುಸ್ತಕ ಕಾಣಿಸಿರುವುದು ಹೀಗೆ:

'ಪುಸ್ತಕ ಬೆಳೆಸಿಕೊಳ್ಳುತ್ತೆ ಕೈಯಿ/ ಪುಳಕಗೊಳ್ಳುತ್ತವೆ ಅಕ್ಷರಗಳು ವಾಕ್ಯಗಳು/ ಇಮ್ಮಡಿಸುತ್ತವೆ ಪುಸ್ತಕದ ಪುಟಗಳು/ ಪುಟಗಳಲ್ಲಿರುವ ಎಲ್ಲವೂ' ಎನ್ನುವ ಕವಿ, 'ಕೈಯಾಡಿದಂತೆ ಕಣ್ಣಾಡಿದಂತೆ ಪುಸ್ತಕ / ಉಬ್ಬುತ್ತ ಉಬ್ಬುತ್ತ ಊದಿಕೊಳ್ಳುತ್ತ / ಬೀಳುತ್ತೆ ನೆಲಕ್ಕೆ; ನೆಲದಲ್ಲಿ ಗಿಡ ಹೂವು / ನದಿ ಕಾಡು ಗಿರಿ ಊರು ನಾವು ನೀವು / ಮೇಲೆ ಆಗಾಗ ಹುಬ್ಬುಗಂಟಿಡುವ ಆಕಾಶ' ಎನ್ನುವ ಮೂಲಕ, ಪುಸ್ತಕ ಪ್ರಪಂಚದೊಳಗೆ ಬ್ರಹ್ಮಾಂಡವನ್ನೂ ಕಾಣಿಸುತ್ತಾರೆ. ಈ ಪುಸ್ತಕ ಇನ್ನೂ ದಪ್ಪ ದಪ್ಪಕ್ಕೆ ಬೆಳೆಯುತ್ತ, ತನ್ನೊಳಗಿನ ಅಸಂಖ್ಯ ಕಪಾಟುಗಳ ಕಾಣಿಸುತ್ತದೆ. ಆ 'ಕಪಾಟುಗಳ ತುಂಬ ಊರು ದೇಶ ಕಾಲ ಸಮಸ್ತ'ವೂ ಇರುವುದನ್ನು ಕವಿ ಕಾಣಿಸುತ್ತಾರೆ.

ಮೊಬೈಲ್ ಫೋನನ್ನು ಅಂಗೈ ಮೇಲಿನ ಜಗತ್ತು ಎಂದು ಕರೆಯುತ್ತೇವೆ. ಈ ಅಗ್ಗಳಿಕೆ ನಿಜವಾಗಿಯೂ ಸಲ್ಲಬೇಕಾದುದು ಪುಸ್ತಕಕ್ಕೆ. ಮೊಬೈಲ್ ಮೂಲಕ ಜಗತ್ತೇನೋ ಅನಾವರಣಗೊಳ್ಳುವುದು; ಆದರೆ, ಆ ಜಗತ್ತು ನಮ್ಮನ್ನು ಬೆಚ್ಚಿಬೀಳಿಸುವಂತಹದ್ದೇ ಹೊರತು, ನಮ್ಮನ್ನು ಬೆಳೆಯಿಸುವುದಿಲ್ಲ. ಪುಸ್ತಕಲೋಕ ಹಾಗಲ್ಲ; ಅದು ಓದುಗನನ್ನು ಬೆಳೆಯಿಸುವಂತಹದ್ದು, 'ಹೊಳೆ'ಯಿಸುವಂತಹದ್ದು. ಸಹೃದಯನೊಂದಿಗಿನ ಪಯಣದಲ್ಲಿ ಪುಸ್ತಕವೊಂದು ತನ್ನ ಚಹರೆಯನ್ನು ಕಳೆದುಕೊಳ್ಳುತ್ತದೆ. 'ಪುಟಾಣಿ ಪುಸ್ತಕದೊಳಗೆ / ಗಜ್ಜುಗದಷ್ಟೂ ಇಲ್ಲದ ಜಗತ್ತು / ಇಟ್ಟುಕೊಳ್ಳಬಹುದು ಅಂಗೈಯಲ್ಲಿ' ಎನ್ನುವ ದಿವಾಕರ್ ಅವರ ಕವಿತೆಯೂ ಪುಸ್ತಕದ ಅಸಾಧಾರಣ ಜೀವಶಕ್ತಿಯನ್ನು ಒತ್ತಿ ಹೇಳುತ್ತದೆ.

ಪುಸ್ತಕಗಳೇ ಇಲ್ಲದ ದಿನ ದೂರವೇನೂ ಇಲ್ಲ ಎನ್ನುವ ಆತಂಕ ವ್ಯಾಪಕವಾಗುತ್ತಿರುವ ದಿನಗಳಿವು. ಈ ಆತಂಕ ನಿಜವಾದೀತೆ? ಆಗಬಹುದೇನೊ? ಮನುಷ್ಯನೇ ಇಲ್ಲದ ದಿನವನ್ನೂ ಈ ಭೂಮಿ ಕಾಣುವ ಸಾಧ್ಯತೆಯೂ ಇದೆಯಲ್ಲವೆ?

■ **ಚಂಪಕಮಾಲಾ**

## ಮಾತೇ ಮುತ್ತು

- ನಂಬಿ ಅನುಭವಿಸುವುದಕ್ಕಿಂತ, ಅನುಭವಿಸಿ ನಂಬುವುದೇ ಶಾಶ್ವತ ಮತ್ತು ಸತ್ಯ.

  —ಕುವೆಂಪು

- ನಿಜವಾದ ವಿದ್ಯೆ, ಮನುಷ್ಯನಿಗೆ ಆಲೋಚಿಸುವುದನ್ನು ಕಲಿಸುತ್ತದೆ.

  —ಹಾ.ಮಾ. ನಾಯಕ

- ಮನಸ್ಸು ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸಿಕೊಳ್ಳದ ಹೊರತು ಇನ್ನಾವುದೂ ಸರಿಯಾಗದು.

  —ಡಿ.ವಿ. ಗುಂಡಪ್ಪ

- ಕಾಲದ ಮರಳಿನಲ್ಲಿ ಹೆಜ್ಜೆಗುರುತುಗಳನ್ನು ಬಿಡು, ಕಾಲನ್ನೆಳೆಯುತ್ತಾ ನಡೆಯಬೇಡ.

  —ಅಬ್ದುಲ್ ಕಲಾಂ

- ಮನುಷ್ಯ ವಿನಾಶದ ಅಂಚಿನಲ್ಲಿದ್ದಾಗಲೂ ಬದುಕಿನ ತಂತು ಎಟುಕಿತೆ ಎಂದು ಅರಸುತ್ತಿರಬೇಕು.

  —ಶಿವರಾಮ ಕಾರಂತ

- ಮಹಾ ಕಾರ್ಯಗಳು ಮಹಾತ್ಯಾಗದಿಂದ ಮಾತ್ರ ಸಾಧ್ಯ.

  —ಸ್ವಾಮಿ ವಿವೇಕಾನಂದ

- ತಪ್ಪುಗಳಿವೆಯಲ್ಲ, ಅವು ನೀವು ಪದೇಪದೆ ಪ್ರಯತ್ನಿಸುತ್ತಿದ್ದೀರಿ ಎಂಬುದಕ್ಕೆ ಪುರಾವೆಗಳು. ತಪ್ಪುಗಳಾದರೆ ಅದಕ್ಕೆ ತಲೆಕೆಡಿಸಿಕೊಳ್ಳಬೇಡಿ. ಪ್ರಯತ್ನ ಮುಂದುವರಿಯಲಿ.

  —ಸುಭಾಷಿತ

- ರೂಪ, ಕಣ್ಣುಗಳಿಗೆ ಸೀಮಿತ. ಗುಣ, ಆತ್ಮದವರೆಗೆ ತಲುಪುವ ಸಾಧನ.

  —ತ್ರಿವೇಣಿ

- ಉಂಡದ್ದು ಉಳಿಯುವುದಿಲ್ಲ. ಆಡಿದ್ದು ಉಳಿಯುತ್ತೆ.

  —ಗಾದೆ